ಪ್ರವೀಣ್ ಕುಮಾರ್ ಜಿ. ಅವರು ಸಿನಿಮಾ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು. ನಿರ್ದೇಶನ ತಂಡದಲ್ಲಿ ಸಕ್ರಿಯವಾಗಿ ದುಡಿಯುತ್ತ, ಸಾಹಿತ್ಯದತ್ತ ಒಲವು ಬೆಳೆಸಿಕೊಂಡಿದ್ದಾರೆ. ಕಥೆ ಮತ್ತು ಕವನ ರಚನೆಯಲ್ಲಿ ಆಸಕ್ತಿ ಹೊಂದಿರುವ ಅವರು ಬಳ್ಳಾರಿಯವರು.

ನನಗೆ ತುಂಬಾ ಸಂಕಟ ಆಗಿದೆ. ಎಫ್‌ಐಆರ್ ಹಾಕಿ ಆರೋಪಿನ ನಾವು ಸಸ್ಪೆಂಡ್ ಮಾಡಿದೀವಿ. ತಪ್ಪಿತಸ್ತರಿಗೆ ಸರಿಯಾದ ಶಿಕ್ಷೆ ಆಗೇ ಆಗತ್ತೆ. ನ್ಯಾಯಾಲಯದ ಮೇಲೆ ನಂಬಿಕೆ ಇಡೋಣ' ಎಂದ ಊರಿನ ಎಪ್ಪತ್ತೈದರ ಎಂ.ಎಲ್.ಎ ಹನುಮಂತಪ್ಪನವರ ಮಾತುಗಳಿಂದ ಸುದ್ದಿ ಗೆಳೆಯರಿಗೆ ನೆಮ್ಮದಿ ಸಿಗಲಿಲ್ಲ. ಗಳಿಗೆ ಎಲ್ಲರನ್ನೂ ದಿಟ್ಟಿಸಿ ಹನುಮಂತಪ್ಪನವರು, 'ನೊಂದವರ ಮನೆಗೆ ಸರ್ಕಾರ ಐದು ಲಕ್ಷ ರೂಪಾಯಿಗಳನ್ನು ಕೊಡ್ತಾ ಇದೆ' ಎಂದರು. ಆ ಮಾತಿನಿಂದ ತಮ್ಮ ಕೆಲಸವಾಯಿತು ಎಂಬಂತೆ ಮೇಲೆದ್ದ ಸುದ್ದಿಯವರು ತಮ್ಮ ಕ್ಯಾಮರಾ ಮೈಕುಗಳನ್ನು ಆರಿಸಿ, ಪೆನ್ನು ಬುಕ್ಕುಗಳ ಕೆಲಸ ಮುಗಿಸಿಕೊಂಡು ಹೋದರು.

ಹತ್ತು ನಿಮಿಷಗಳಾದ ಮೇಲೆ ಚಂದ್ರಶೇಖರ ಬಂದು ಹನುಮಂತಪ್ಪನವರ ಕಾಲಿಗೆ ಬಿದ್ದ. 'ಬೋಸುಡಿಕೆ, ಹೇಲ್ ತಿನ್ನಾ ಕೆಲ್ಸಾ ಮಾಡಿ, ಈಗ ಬಂದು ಕಾಲಿಗೆ ಬೀಳಾಕತ್ತೀಯಾ? ಕೆಲ್ಸಾ ಕೊಡ್ಸಾಕೂ ಕಾಲ್ ಹಿಡ್ದಿದ್ದೆ, ಕೆಲ್ಸಾ ಉಳ್ಸಾಕೂ ಕಾಲ್ ಹಿಡಿಯಾಕತ್ತೀ. ಇಂಥಾ ಬಂಡ್ ಬಾಳು ಯಾಕ್ ಬಾಳ್ತೀ?' ಎಂದು ಗುಡುಗಿದರು ಹನುಮಂತಪ್ಪನವರು. ಅಷ್ಟರಲ್ಲಿ ಬಂದ ನಡೆಯುಲಿಯ(ಮೊಬೈಲ್) ಕರೆಗೆ ಮಾರ್ನುಡಿದು ಮತ್ತೆ ಚಂದ್ರಶೇಖರನಿಗೆ ಬೈಯ್ಯಬೇಕು ಎನ್ನುವಷ್ಟರಲ್ಲಿ, ಹುಡುಗಿಯೊಬ್ಬಳು ಬಂದು ಚಂದ್ರಶೇಖರನ ಹಿಂದೆ ನಿಂತಳು. ಅವಳನ್ನು ನೋಡಿ ಹನುಮಂತಪ್ಪನವರು ತಣ್ಣಗಾದರು. ಚಂದ್ರಶೇಖರನ ಸನ್ನೆಗೆ ಮೈಕೈ ತುಂಬಿಕೊಂಡು ಚೆನ್ನಾಗಿದ್ದ ಇಪ್ಪತ್ತರ ಯಾವುದೋ ಕಾಲೇಜಿನ ಯುನಿಫಾರ್ಮಿನಲ್ಲಿದ್ದ ಹುಡುಗಿ, ಎಂಎಲ್‌ಎರನ್ನು ನೋಡಿ ನಕ್ಕಳು. 'ಆಯ್ತು, ನಾನೇನೋ ಮಾಡ್ತೀನಿ ನಡೀ' ಎಂದು ಹುಡುಗಿಯ ಹೆಗಲ ಮೇಲೆ ಕೈ ಹಾಕಿ ಗಲ್ಲ ಹಿಂಡಿತ್ತಾ ಮಲಗುವ ಕೋಣೆಯತ್ತ ನಡೆದರು.

'ಎಂ.ಎಲ್.ಎಯವರ ಹೊಸ ಪರ್ಸನಲ್ ಕಾಮಗಾರಿ' ಎಂದು ಮರುನಾಳೇ(ದಿನ) ಟಿವಿ ಚಾನೆಲ್ಲುಗಳೆಲ್ಲಾ ಬ್ರೇಕ್ ಆಗಿದ್ದವು. ಆದರೆ, ಕೆಲವರು ಸುದ್ದಿ ಧರ್ಮವನ್ನು ಮರೆತು ನೋಡಿಯೊ(ವಿಡಿಯೊ) ಮಬ್ಬು ಮಾಡದೇ ಆಡಿಸುತ್ತಿದ್ದರು. ಸುದ್ದಿ ಹೇಳುವವರೆಲ್ಲರೂ ಹೆಂಗಸರೇ ಆಗಿ, 'ನೋಡ್ರಿ ಮುದುಕನ ಹಾರಾಟ', 'ಯಾರಿವಳು ಮಾಯಾಂಗನೆ, ಸರಕಾರವನ್ನು ಉರುಳಿಸಲು ಬಂದವಳು' ಎಂದು ಒಂದೇ ದನಿಯಲ್ಲಿ ಒಂದೇ ಏರಿಳಿತದಲ್ಲಿ ಚೀರುತ್ತಿದ್ದರು. ಸರಸದ ನಡುವೆ ಬರಿ ಮೈಯ ಹನುಮಂತಪ್ಪನವರು ಹುಡುಗಿಯೊಂದಿಗೆ ಹರಟೆ ಹೊಡೆಯುತ್ತಾ ಪಕ್ಷದ ಹಿರಿಯರನ್ನು, ಮಠಾಧೀಶರನ್ನು, ಕನ್ನಡಪರ ಹೋರಾಟಗಾರರನ್ನು, ರೈತರನ್ನು, ಸಚಿವ ಸ್ಥಾನ ನೀಡದೇ ಸತಾಯಿಸುತ್ತಿರುವ ಹೈಕಮಾಂಡ್‌ನವರನ್ನು ಮನಸಾರೆ ಬೈಯ್ಯುತ್ತಿದ್ದರು. ಎಂ.ಎಲ್.ಎ ಅವರ ಮಾತುಗಳನ್ನು ಟಿವಿಯವರು ಅಕ್ಷರಗಳಲ್ಲಿ ಮೂಡಿಸುತ್ತಿದ್ದರು.

ವಿರೋಧ ಪಕ್ಷದವರು ದಾರಿ ತಪ್ಪಿದ ಹನುಮಂತಪ್ಪನವರ ರಾಜೀನಾಮೆಗಾಗಿ ಬಾಯಿ ಮಾಡುತ್ತಿದ್ದರು. 'ವಿಡಿಯೊದಲ್ಲಿ ಇರೋದು ನಾನಲ್ಲ, ಇದರಲ್ಲಿ ವಿರೋಧ ಪಕ್ಷದವರ ಕೈವಾಡವಿದೆ. ನನ್ನನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ಇದು. ನಾನು ಸುಮ್ಮನಿರುವುದಿಲ್ಲ, ಕಾನೂನು ಹೋರಾಟ ಮಾಡ್ತೀನಿ' ಎಂದು ಟಿವಿಗಳ ಮುಂದೆ ರೊಚ್ಚಿಗೆದ್ದರು.

ಹನುಮಂತಪ್ಪನವರ ಒಂದು ಮಾತು ಮಾತ್ರ ದಲಿತರನ್ನು ಸಿಕ್ಕಾಪಟ್ಟೆ ರೊಚ್ಚಿಗೆಬ್ಬಿಸಿತ್ತು. 'ನಿಮ್ಮ ಚಂದ್ರಶೇಖರ್‌ಗ ಬುದ್ಧಿ ಇಲ್ಲ. ಆ ಸೂಳೇಮಕ್ಳೂ ಹಂಗೇ ಐದಾರ ಬಿಡು. ಇವ್ರು ಯಾಕ ನಮ್ಮೋರ್ ಜೊತಿಗೆ ಸೇರ್ಬೇಕು? ಇವ್ರುನ್ನೆಲ್ಲಾ ನಮ್ ಸಮುಕ್ಕ ಕುಂದ್ರಿಸ್ಗೊಂಡು ಓದಾಕ ಬಿಟ್ವೆಲ್ಲಾ ಅದೇ ನಮ್ ತಪ್ಪು. ನಮ್ ಸಂವಿಧಾನಾನೇ ಸರಿ ಇಲ್ಲ. ನಾನು ಸಿಎಂ ಆಗ್ತೀನಲಾ ಮೊದ್ಲು ಮೀಸಲಾತಿ ತಗೀತೀನಿ ನೋಡು. ಇಡೀ ದೇಶ್ದಾಗ ದಿನುಕ್ಕ ನೂರಾರ್ ಜನ ಸಾಯ್ತಾರ ಇಂಥಾ ನನ್ ಮಕ್ಳು, ಆದ್ರೆ ಸುದ್ದಿಯಾಗಿದ್ದು ಮಾತ್ರ ನಮ್ಮೂರಿಂದು. ಎಲ್ಲಾ ನನ್ ಹಣೇಬರಾ. ಹೋಗ್ಲಿ ಬಿಡು.